ಪ್ರಸ್ತುತ ಚುನಾವಣಾ ಆಯೋಗವು (ಕ್ಷೇತ್ರ ಪುನರ್ವಿಂಗಡಣಾ ಆಯೋಗದ) ವಿಧಿಸಿದ್ದ ನಿರ್ಬಂಧವು ಇತ್ತೀಚೆಗೆ ರದ್ದಾಗಿರುವುದರಿಂದ ಉಳಿದ ಲಂಬಾಣಿ ತಾಂಡಾ:ಗೊಲ್ಲರಹಟ್ಟಿ:ಹ್ಯಾಮ್ಲೆಟ್(ಮಜರೆ)ಇತ್ಯಾದಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಸಂಬಂಧಿಸಿದ ಎಲ್ಲಾ ಜಿಲ್ಲಾಧಿಕಾರಿಗಳಿಂದ ವರದಿ/ಪ್ರಸ್ತಾವನೆ ಪಡೆಯಲಾಗುತ್ತಿದ್ದು, ಅರ್ಹವಿರುವ ಲಂಬಾಣಿ ತಾಂಡ, ಹಟ್ಟಿ, ಮಜರೆ ಇತ್ಯಾದಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ನಿಗಧಿಪಡಿಸಿರುವ ಮಾನದಂಡಗಳನ್ವಯ (ಮಾರ್ಗಸೂಚಿ) ನಿಯಮಾನುಸಾರ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (250) 194
2. ಸದಸ್ಯರ ಹೆಸರು : ಶ್ರೀ ಉಮೇಶ್ ವಿಶ್ವನಾಥ ಕತ್ತಿ
3. ಉತ್ತರಿಸುವ ಸಚಿವರು : (ಶ್ರೀ.ಬಸವರಾಜ್ ಬೊಮ್ಮಾಯಿ)
ಜಲಸಂಪನ್ಮೂಲ ಸಚಿವರು.

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಕೊಟಬಾಗಿ ಏತ ನೀರಾವರಿ ಯಾವಾಗ ಮಂಜೂರಾಗಿದೆ; ಕಾಮಗಾರಿ ಪ್ರಾರಂಭವಾಗಿ ಮುಕ್ತಾಯಗೊಂಡಿದ್ದು ಯಾವಾಗ;

ಕೊಟಬಾಗಿ ಏತ ನೀರಾವರಿ ಯೋಜನೆಗೆ ಸರ್ಕಾರದ ಪತ್ರ ಸಂಖ್ಯೆ: ಐಡಿ/114/ಎನ್ಐಎನ್/92 ದಿನಾಂಕ: 31.10.92ರಲ್ಲಿ ಮಂಜೂರಾಗಿದೆ. ಕಾಮಗಾರಿ 1994 ರಲ್ಲಿ ಪ್ರಾರಂಭವಾಗಿ ಆಗಸ್ಟ್ 2007 ರಲ್ಲಿ ಪೂರ್ಣಗೊಂಡಿದೆ.

ಆ) ಹಾಗಿದ್ದಲ್ಲಿ ಏತ ನೀರಾವರಿ ಮಂಜೂರಾದ ಹಂತದಲ್ಲಿ ಉದ್ದೇಶಿತ ನೀರಾವರಿ ಅಚ್ಚುಕಟ್ಟು ಪ್ರದೇಶ ಎಷ್ಟಿತ್ತು;

ನೀರಾವರಿ ಅಚ್ಚುಕಟ್ಟು ಪ್ರದೇಶ 14,880 ಎಕರೆ (6,022 ಹೆ) ಆಗಿತ್ತು.

ಇ) ಸದರಿ ಏತ ನೀರಾವರಿ ಹೆಚ್ಚುವರಿ ಅಚ್ಚುಕಟ್ಟು ಪ್ರದೇಶ ಯೋಜನೆಯಾದದ್ದು ನಿಜವೇ; ಹೆಚ್ಚುವರಿ ಆದಲ್ಲಿ ಸದರಿ ಯೋಜನೆಗೆ ಒಳಪಡುವ ಅಚ್ಚುಕಟ್ಟು ಪ್ರದೇಶದ ನೀಲ ನಕ್ಷೆಯು ಯೋಜನೆಗೆ ಸೂಕ್ತವಾಗಿದೆಯೇ;

ಯೋಜನೆಯ ಅಚ್ಚುಕಟ್ಟಿನಲ್ಲಿ ಹೆಚ್ಚುವರಿ ಆಗಿರುವುದು ನಿಜವಿದ್ದು, ಸದರಿ ಯೋಜನೆಗೆ ಈ ಹೆಚ್ಚು ಅಚ್ಚುಕಟ್ಟುಪ್ರದೇಶವು ಸೂಕ್ತವಾದುದರಿಂದ ಈ ಹೆಚ್ಚುಪರಿಯನ್ನು ಕೋಟಬಾಗಿ ಏತನೀರವರಿ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ.

ಈ) ಈ ಯೋಜನೆಗೆ ಅಚ್ಚುಕಟ್ಟು ಪ್ರದೇಶ ಹೆಚ್ಚುವರಿಯಾದ ನಂತರ ನೀರಿನ ಪ್ರಮಾಣ ಹೆಚ್ಚುವರಿಯಾಗಿ ನಿಗದಿಪಡಿಸಲಾಗಿದೆಯೇ;

ಏತ ನೀರಾವರಿ ಯೋಜನೆಗೆ 1.88 ಟಿಎಂಸಿ ಪ್ರಮಾಣದ ನೀರನ್ನು ನಿಗದಿಪಡಿಸಲಾಗಿರುತ್ತದೆ. 1.88 ಟಿಎಂಸಿ ಪ್ರಮಾಣವು ಯೋಜನೆಯ ಪರಷ್ಕೃತ

ಕ್ಷೇತ್ರದ ಅಚ್ಚುಕಟ್ಟಿಗೆ ಸಾಕಾಗುವುದರಿಂದ ಹೆಚ್ಚುವರಿ ನೀರಿನ ಪ್ರಮಾಣ ನಿಗದಿಪಡಿಸಲಾಗಿರುವುದಿಲ್ಲ.

ಊ) ಹಾಗಿದ್ದಲ್ಲಿ, ಹೆಚ್ಚುವರಿ ಯೋಜನೆಯಿಂದ ಅಚ್ಚುಕಟ್ಟು ಪ್ರದೇಶದ ರೈತರಿಗೆ ನೀರು ಪೂರ್ಣ ಪ್ರಮಾಣದಲ್ಲಿ ಪೂರೈಸಲು ಸಾಧ್ಯವಾಗದೇ ಇರುವುದು ನಿಜವೇ;

ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಋ) ಈ ಯೋಜನೆಯಿಂದ ಪ್ರಥಮ ಹಂತದಲ್ಲಿ 4 ತಿಂಗಳ ಕಾಲ ನೀರು ಪೂರೈಸುತ್ತಿದ್ದು, ಈ ಯೋಜನೆಯೊಳಗೆ ಅಚ್ಚುಕಟ್ಟು ಪ್ರದೇಶ ಹೆಚ್ಚುವರಿಯಾದ ನಂತರ 8 ತಿಂಗಳ ಕಾಲ ನೀರು ಪೂರೈಸಲು ಸಾಧ್ಯವೇ;

ಯೋಜನಾ ವರದಿಯಲ್ಲಿ ಮುಂಗಾರು ಹಂಗಾಮಿನ 4 ತಿಂಗಳಿನ ಅವಧಿಗೆ ಮಾತ್ರ ನೀರು ಪೂರೈಸಲು ಅವಕಾಶ ಇರುತ್ತದೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಸಂ. : (252)195

2. ಸದಸ್ಯರ ಹೆಸರು : ಶ್ರೀ ಉಮೇಶ್ ವಿಶ್ವನಾಥ್ ಕತ್ತಿ

3. ಉತ್ತರಿಸುವ ಸಚಿವರು : (ಶ್ರೀ ಗೋವಿಂದ ಎಂ.ಕಾರಜೋಳ) ಮಾನ್ಯ ಸಣ್ಣ ನೀರಾವರಿ, ಹಾಗೂ ಸಾಂಖ್ಯಿಕ ಸಚಿವರು

ಅ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಕಮತನೂರ ಕೆರೆಯು ಮಂಜೂರಾದದ್ದು ಯಾವಾಗ; ಇದರ ಕಾಮಗಾರಿ ಪ್ರಾರಂಭವಾಗಿ ಮುಕ್ತಾಯಗೊಂಡಿದ್ದು ಯಾವಾಗ;

ಸರ್ಕಾರದ ಆದೇಶ ಸಂಖ್ಯೆ:ಐಡಿ 89 ಎಂಐಬಿ 1988, ದಿನಾಂಕ 21/10/1992ರಲ್ಲಿ ಮಂಜೂರಾತಿ ನೀಡಲಾಗಿದೆ. ಕಾಮಗಾರಿಯನ್ನು ದಿನಾಂಕ 06/02/1997 ರಂದು ಪ್ರಾರಂಭಿಸಲಾಗಿದ್ದು, ಇನ್ನೂ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ.

ಆ ಈ ಕೆರೆಯಲ್ಲಿ ನೀರು ತುಂಬಿದ್ದು ಯಾವಾಗ; ಸದರಿ ಕೆರೆಯು ಕುಸಿದು, ಹಾಳಾಗಿರುವುದು ನಿಜವೇ; ಈ ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿರುವ ಜಮೀನು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

1999ರ ಮಳೆಗಾಲದಲ್ಲಿ ಕೆರೆಯಲ್ಲಿ ನೀರು ನಿಲ್ಲಿಸಲಾಗಿತ್ತು. ಈ ಕೆರೆಯು ಕುಸಿದಿರುವುದು ನಿಜ. ಅಚ್ಚುಕಟ್ಟು ಪ್ರದೇಶದಲ್ಲಿರುವ ಜಮೀನು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ ಹಾಗಿದ್ದಲ್ಲಿ, ಅಚ್ಚುಕಟ್ಟು ಪ್ರದೇಶದ ರೈತರಿಗೆ ಪರಿಹಾರ ಧನ ನೀಡಲಾಗಿದೆಯೇ; ಸದರಿ ಕೆರೆಯ ಕುಸಿತದಿಂದ ಅಚ್ಚುಕಟ್ಟು ಪ್ರದೇಶದ ಜಮೀನಿನಲ್ಲಿ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;